ದೊಡ್ಡ ಹುಲಿ ದಾಳಿ ಮಾಡಿತು. ನನ್ನ ಪ್ರಾಣ ಪಣಕ್ಕಿಟ್ಟು ದೊರೆಯನ್ನು ಕಾಪಾಡಿದೆ. ಆಗಿಂದಾಗಲೇ ಬರೆದುಕೊಟ್ಟನು ಈ ಕಾಗದ' ಹೇಳಿದನು ಜೇಬಿನಲ್ಲಿರುವ ಕವರು ತೋರಿಸುತ್ತಾ.

'ಹಾಗಿದ್ದರೆ ಆಗಲೇ ಹಕ್ಕುಪತ್ರ ಮಾಡಿಕೊಳ್ಳಬಾರದಾ... ಗ್ರಾಮ ಕಂದಾಯ ಅಧಿಕಾರಿಯಿಂದಲೇ ಬರೆಸಿದ್ದಿದ್ದರೆ ಮುಗಿಯುತ್ತಿತ್ತು' ಎಂದನು.

'ಆಗಲೇ ಬರೆಸುತ್ತೇನೆಂದನು ಸಾರೂ. ಬೆಳಗಾಗಿದ್ದರೆ ಕೆಲಸ ಆಗಿಹೋಗುತ್ತಿತ್ತು. ಅಗೋ... ಅದೇ ರಾತ್ರಿ ದರಿದ್ರ ನನ್ನ ನೆತ್ತಿಯ ಮೇಲೇರಿತು. ನಾನು ಒಳ್ಳೆಯ ಕೆಲಸವನ್ನೇ ಮಾಡಿದೆನೆಂದುಕೊಂಡೆ. ಆದರೆ ದೊರೆಗೆ ಕೋಪ ಬಂದಿತು. 'ಭೂಮಿಯ ಮಾತು ಹಾಗಿರಲಿ ಕಾಣಿಸಿದರೆ ಕೊಚ್ಚಿಬಿಡುತ್ತೇನೆ ಎಂದ' ನೋವಿನಿಂದ ಹೇಳಿದನು ಬೊಂದಯ.

ತಹಶೀಲ್ದಾರನಿಗೆ ತಕ್ಷಣ ಏನೋ ನೆನಪಾಯಿತು. ಆಸಕ್ತಿಯಿಂದ, 'ಅಂತಹ ಕೆಟ್ಟ ಕೆಲಸ ಏನು ಮಾಡಿದೆ... ನೀನು ದೊರೆಗೆ ಎದುರು ತಿರುಗಿದೆಯಾ...' ಕೇಳಿದನು.

ಕೇಳುವರೋ ಇಲ್ಲವೋ ಎಂದುಕೊಂಡ ಬೊಂದಯನಿಗೆ ತಹಶೀಲ್ದಾರನ ಮಾತುಗಳಿಂದ ಹುಮ್ಮಸ್ಸು ಮೂಡಿತು. 'ಹೇಳಿದೆನಲ್ಲವಾ ಸಾರೂ... ಶನೇಶ್ವರ ನೆತ್ತಿಮೇಲೆ ಕುಳಿತನೆಂದು. ಆಗ ಸ್ವಲ್ಪ ನಕ್ಸಲರ ಭಯವಿತ್ತು. ದೊರೆ ಸಿರಿಸಿಲ್ಲಕ್ಕೆ ವಾಸ ಬದಲಾಯಿಸಿದನು. ಕಾರು ಕೊಂಡುಕೊಂಡನು. ನಾನು ಕಾರ್ ಡ್ರೈವರ್ ಆದೆ. ಅವರು ಹಾಕಿದ ಗೆರೆ ದಾಟದಿರುವವರೆಗೆ ಮಾತ್ರ ದೊರೆಯ ಪ್ರೀತಿ. ಮೀರಿದೆವೆಂದಿಟ್ಟುಕೊಳ್ಳಿ... ಬೆಂಕಿಯ ಜೊತೆಗಿನ ಸರಸ ಅಪಾಯವೇ' ಎನ್ನುತ್ತ ಹೇಳಲಾರಂಭಿಸಿದನು. ಕಾರು ವೇಗವಾಗಿ ಚಲಿಸುತ್ತಿದೆ. ಡ್ರೈವರ್‌ಗೆ ನಿಧಾನವಾಗಿ ಹೋಗುವಂತೆ ಹೇಳಿ ಆತನ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದಾನೆ ತಹಶೀಲ್ದಾರ.

★★★

'ಏಯ್ ಬೊಂದಾ...' ಕರೆದನು ದೊರೆ. ಒಳಗಿನಿಂದ ಓಡಿಬಂದನು ಬೊಂದಯ.

'ವೀರನಹಳ್ಳಿಗೆ ಹೋಗಬೇಕೋ' ಎಂದನು ದೊರೆ.

ಹೊತ್ತು ಮುಳುಗುತ್ತಿದೆ. ವಾರದಿಂದ ಒಂದೇ ಸಮನೆ ಮಳೆ. ಸಣ್ಣ ನದಿಗಳು, ಹರಿವುಗಳು ಉಕ್ಕಿ ಪ್ರವಹಿಸುತ್ತಿವೆ. ರಸ್ತೆ ಹಾಳಾಗಿದೆ. ಈ ಸರಿಹೊತ್ತಿನಲ್ಲಿ ವೀರನಹಳ್ಳಿಗೆ ಹೋಗುವುದು ಬಹಳ ಕಷ್ಟ. ಆದರೂ ಏಕೆ ಎಂದು ಕೇಳಲಿಲ್ಲ. 'ಸರಿ' ಎಂದನು ಬೊಂದಯ.

'ಇಬ್ಬರು ದೊರೆಸಾನಿಗಳು ಬರುತ್ತಾರೆ. ಹೀಗೆ ಹೋಗಿ ಹಾಗೆ ಬಾ... ಮೊದಲೇ ಕಾಲ ಸರಿಯಿಲ್ಲ. ರಾತ್ರಿ ಬೇರೆ. ಹೌದು, ನನಗೆ ನಾಳೆ ಒಂದು ವಿಷಯ ನೆನಪು ಮಾಡೋ. ಬಂಡಲಿಂಗಂಹಳ್ಳಿಗೆ ಹೋಗುತ್ತಿದ್ದೇನೆ. ಗ್ರಾಮ ಕಂದಾಯ ಅಧಿಕಾರಿಗೆ ಹೇಳಿ ನಿನಗೆ ಕೊಡುತ್ತೇನೆಂದ ಭೂಮಿ ನಿನ್ನ ಹೆಸರಿಗೆ ಬರೆಸುತ್ತೇನೆ' ಎಂದನು.

'ಸರಿ' ಎನ್ನುತ್ತ ಬೊಂದಯ್ಯ ಆಕಾಶ ನೋಡಿದನು. ಕತ್ತಲಾವರಿಸಿದೆ. ಬಟ್ಟೆ ತೆಗೆದುಕೊಂಡು ಕಾರಿನ ಬಳಿ ಬಂದನು. ಅಲ್ಲೇ ಕೆಲಸಗಾರ ಬಾಲಯ್ಯ ಇದ್ದಾನೆ. 'ಅರೇ ಬಾಲಿ... ನೀನೂ ಅವರೊಂದಿಗೆ ಹೋಗೋ... ಜೊತೆಗಿದ್ದಂತಾಗುತ್ತದೆ. ನೀನಿದ್ದರೆ ಬೇಗ ಬರುತ್ತಾರೆ. ಮೊದಲೇ ಇವನು ಜಡ ಮನುಷ್ಯ' ಎಂದನು ದೊರೆ.

ಬಾಲಯ್ಯನಿಗೆ ಬಹಳ ದಿನದಿಂದ ಕಾರು ಹತ್ತುವ ಆಸೆ. ಬೊಂದಯನನ್ನು ಸಾಕಷ್ಟು ಬಾರಿ ಕೇಳಿದ್ದನು ಆದರೆ ಅವನು ಕಿವಿಯ ಮೇಲೆ ಹಾಕಿಕೊಂಡಿರಲಿಲ್ಲ.

'ಊಂ... ಹೋಗುತ್ತೇನೆ ದೊರೆ...' ಸಂಭ್ರಮದಿಂದ ಹೇಳಿ ತಾನೂ ಒಂದು ಬಟ್ಟೆಯನ್ನು ತೆಗೆದುಕೊಂಡು ಕಾರು ಒರೆಸಲಾರಂಭಿಸಿದ. ಐದು ನಿಮಿಷದಲ್ಲಿ ಅತ್ತೆ ಸೊಸೆ ಇಬ್ಬರೂ ಬಂದು ಕಾರು ಹತ್ತಿ ಕುಳಿತರು. ಎಲ್ಲರಿಗೂ ಎಲ್ಲ ಜಾಗ್ರತೆಗಳನ್ನು ಹೇಳಿದ ದೊರೆ, ಮತ್ತೊಮ್ಮೆ, 'ಬಾಲಿ... ಏಯ್...